ಶ್ರೀ ಟಿ. ಕೆ. ಗಂಗಿರೆಡ್ಡಿ.—ಸ್ವಾಮಿ, ಈವಾಗ ಎಸ್ಟಿಮೇಟ್ ರಿವೈಸ್ ಆಗಿಲ್ಲವೇ ? ಆಗಿನ ಷೆಡ್ಯೂಲ್ ರೇಟಿಗೂ ಈಗಿನ ಷೆಡ್ಯೂಲ್ ರೇಟಿಗೂ ವ್ಯತ್ಯಾಸ ಇಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಅವೇ ಎಸ್ಟಿಮೆಟ್ಟನ್ನೇ ನಾವು ಈಗ ಇಟ್ಟುಕೊಂಡಿರುವುದು.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಇಷ್ಟು ತಡವಾಗುವುದಕ್ಕೆ ಕಾರಣ ಏನು, ಸ್ವಾಮಿ ?

ಶ್ರೀ ಡಿ. ಪರಮೇಶ್ವರಪ್ಪ.—ಈಗತಾನೆ ಗೌರ್ನಮೆಂಟ್ ಅಪ್ರೂವಲ್‌ಗೆ ಬಂದಿದೆ. ಅಪ್ರೂವ್ ಆಗುವ ನಿರೀಕ್ಷೆ ಇದೆ.

ಶ್ರೀ ಟಿ. ಕೆ. ಗಂಗಿರೆಡ್ಡಿ.—ಈ ಬಜೆಟ್ಟಿನಲ್ಲಾದರೂ ಸೇರಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಪ್ರಯತ್ನ ಮಾಡುತ್ತೇನೆ.

Collection of fees for Entry in Temples

103. **Sri K. RATNAKUMAR SHETTY** (Mudabidri).—

Will the Minister for Revenue be pleased to state :—

(*a*) whether the Government authorities in Sravanabelagola are collecting 0–50 paise per head from the devotees for Dharsanam of Sri Gomateswara ;

(*b*) if so, the authority for such collection ;

(*c*) the composition of the governing body of the temple and whether it is appointed under section 6 of the Muzrai Act of 1927.

(*d*) whether any rules have been framed under the Act empowering the collection of 50 Paise from the devotees ;

(*e*) the object of these collections ;

(*f*) whether any account of the collections made is being maintained ;

(*g*) the estimated and actual collection ;

(*h*) the expenditure incurred per month to maintain the staff there ;

(*i*) whether there is a proposal before Government to introduce ticket system for admission to have 'Dharsanam' in all the temples of the Mysore State which are under control of the Endowment ?

Sri H. V. KOUJALGI (Minister for Revenue).—

(*a*) Yes.

(*b*) As per G. O. No. RD 218 MET 67, dated 6-11-1967.

(*c*) A governing body called the Committee of Management, Digambar Jain Muzrai Institutions, Sravanabelagola, consisting of 24 members, under the Chairmanship of the Swamiji of the Jain Mutt, Sravanabelagola, has been constituted in Government Notification No. RD 2 MST 67, dated 18-1-1967 in pursuance of clause (iv) of sub-rule

(2) and sub-rule (3) of rule 3, Sravanabelagola Digamber Jain Muzrai Institution Management Rules, 1967 framed in exercise of powers conferred by Sections 7 and 41 of the Mysore Religious and Charitable Institutions Act, 1927.

(*d*) No.

(*e*) Development of the area.

(*f*) Yes.

(*g*) A sum of Rs. 74,795.50 has been collected from the Tourists up to end of 15th December, 1968.

(*h*) Rs. 533 per month.

(*i*) No.

ಶ್ರೀ ಕೆ. ರತ್ನಕುಮಾರ್ ಶೆಟ್ಟಿ.—(ಅ) ಗೆ ಉತ್ತರವಾಗಿ ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರ ದರ್ಶನಕ್ಕೆ ಬರುವ ಭಕ್ತಾದಿಗಳಮೇಲೆ 50 ಪೈಸೇ ಟಿಕೆಟ್ ಇಟ್ಟಿದ್ದೇವೆ ಎಂದು ಉತ್ತರ ಕೊಟ್ಟಿದ್ದೀರಿ. ಅದರಿಂದ ಸಾಮಾನ್ಯ ಜನತೆಗೆ ಅಲ್ಲಿಗೆ ಹೋಗುವ ದರ್ಶನದ ಹಕ್ಕು, ಅವರ ಹಕ್ಕು ಭಾಧ್ಯತೆಗಳನ್ನೂ ಲೋಪ ಮಾಡಿದಂತೆ ಆಗುತ್ತದೆ, ಅನ್ಯಾಯವಾಗುತ್ತದೆ ಬೇರೆ ದೇವಸ್ಥಾನಗಳಿಗೆ ಆಗಲಿ 50 ಪೈಸೇ ಟಿಕೆಟ್ ಇಟ್ಟಿಲ್ಲ. ಧರ್ಮಕ್ಕೆ ಲೋಪವಾಗಿದೆ. ಅನ್ಯಾಯವಾಗಿದೆ. ಆದುದರಿಂದ ತಾವು ಆದಷ್ಟು ಜಾಗ್ರತೆ ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ ?

†ಶ್ರೀ ಹೆಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳಿದಂತೆ ಯಾವ ಧರ್ಮಕ್ಕೂ ಲೋಪವಾಗಿಲ್ಲ. ಈಗ ತಮಗೆರ್ಲಾ ಗೊತ್ತಾದಂತೆ ಇದು ಯಾತ್ರಿಕರ ಹಿತದೃಷ್ಟಿಯಿಂದ ಅವರಿಗೆ ಸೌಲಭ್ಯಗಳನ್ನು ಹೆಚ್ಚಿಸುವುದಕ್ಕೋಸ್ಕರ ಮಾಡಿರುವುದರಿಂದ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾನು ಒಪ್ಪುವುದಿಲ್ಲ.

ಶ್ರೀ ಕೆ. ರತ್ನಕುಮಾರ್ ಶೆಟ್ಟಿ.— ಮಾನ್ಯ ಮಂತ್ರಿಗಳು ಹೇಳುವುದನ್ನು ನಾನು ಒಪ್ಪುವುದಿಲ್ಲ. ತುರ್ತಾಗಿ ಇದನ್ನು ವಾಪಸು ಪಡೆಯದೆ ಇದ್ದರೆ ಅನ್ಯಾಯವಾಗುತ್ತದೆ. ಧರ್ಮಲೋಪವಾಗುತ್ತದೆ. ದೇವರ ವಿಗ್ರಹವನ್ನು ನೋಡಿಕೊಂಡು ಬರಲು 50 ಪೈಸೆ ಫೀ ಹಾಕಿರುವುದರಿಂದ ಅನೇಕ ಜನ ಯಾತ್ರಾರ್ಥಿಗಳು ದೇವರ ದರ್ಶನ ಪಡೆಯದೆ ವಾಪಸು ಬರುತ್ತಿದ್ದಾರೆ. ಈ ಬಗ್ಗೆ ಆದಷ್ಟು ಬೇಗನೆ ವಿಚಾರ ಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ವಿ. ಕೌಜಲಗಿ.—ದೇವರಿಗೂ ಸಹಿತ ದುಡ್ಡು ಬೇಕಾಗುತ್ತದೆ, ಅಲ್ಲಿ ಅಭಿವೃದ್ಧಿ ಆಗ ಬೇಕಾದರೆ ದುಡ್ಡು ಬೇಕಾಗುತ್ತದೆ.

Mr. SPEAKER.—Next Question.

ಶ್ರೀ ಎಚ್. ಬಿ. ಜ್ವಾಲನಯ್ಯ.—ಶ್ರವಣಬೆಳಗೊಳದಲ್ಲಿರುವ ಜನ ಪ್ರತಿನಿತ್ಯವೂ ಪೂಜೆಗೆ ಹೋಗಬೇಕಾದರೆ 50 ಪೈಸೆ ಕೊಡಬೇಕೆಂದು ಹೇಳುವುದು ಯಾವ ನ್ಯಾಯ ? ಪ್ರತಿದಿನ 50 ಪೈಸೆ ಕೊಟ್ಟು ಪೂಜೆ ಮಾಡಿಕೊಂಡು ಬರಲು ಸಾಧ್ಯವೇ ? ಇಂಥ ವಿಚಾರವನ್ನು ಪರಿಶೀಲನೆ ಮಾಡದೆ ಹೋದರೆ ಇನ್ನು ಯಾವುದನ್ನು ಪರಿಶೀಲನೆ ಮಾಡುತ್ತೀರಿ ?

Mr. SPEAKER.—I have called the next question.

Promotion to selection grade in Government High Schools

125. **Sri H. B. JWALANAIAH** (Hassan).—

Will the Minister for Education be pleased to state :—

(*a*) whether the ratio of 1 : 4 for promotions in Selection Grade of Pandits, Munshis and other language teachers in Government High Schools, etc., is maintained up-to-date ;

(*b*) if not, the reason for the same ?